# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 325 |
| ಉತ್ತರಿಸಬೇಕಾದ ದಿನಾಂಕ | : | 15.02.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ದುಬಾರಿ ಪಶು ಆಹಾರ, ಚರ್ಮಗಂಟು ರೋಗ ಸೇರಿದಂತೆ ಅನೇಕ ಕಾರಣಗಳಿಂದ ಒಂದು ವರ್ಷದಲ್ಲಿ ಹೈನುಗಾರಿಕೆ ತೊರೆಯುತ್ತಿರುವವರ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ರೈತರು ಹೈನುಗಾರಿಕೆ ತೊರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br>ಆದಾಗ್ಯೂ, ಹೈನುಗಾರ ರೈತರಿಗೆ ಹೊರೆಯಾಗದಂತೆ ಸರ್ಕಾರ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲು ಉತ್ಪಾದನೆಗೆ ರೂ.5/- ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ರಾಜ್ಯದಲ್ಲಿ ಜಾನುವಾರುಗಳಿಗೆ ಚರ್ಮಗಂಟುರೋಗ ಬಂದಿದ್ದು, ಎಲ್ಲಾ ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ. ಮರಣ ಹೊಂದಿದ ಜಾನುವಾರುಗಳಿಗೆ ಪರಿಹಾರ ಧನ ವಿತರಿಸಲಾಗಿದೆ.<br>2022-23ರಲ್ಲಿ ರಾಜ್ಯದಲ್ಲಿ ಚರ್ಮಗಂಟು ರೋಗವು ತೀವ್ರವಾಗಿ ಬಾಧಿಸಿದ್ದು, ದಿನಾಂಕ:07-02-2023 ರವರೆಗೆ 3,25,353 ಜಾನುವಾರುಗಳಿಗೆ ಚರ್ಮಗಂಟು ರೋಗೋದ್ರೇಕ್ಕೊಳಗಾಗಿದ್ದು 30,297 ಜಾನುವಾರುಗಳು ಸಾವನ್ನಪ್ಪಿರುತ್ತದೆ.<br>ಈ ರೋಗದಿಂದ ಸಾವನ್ನಪ್ಪಿದ ಜಾನುವಾರುಗಳ ಮಾಲೀಕರಿಗೆ ಪರಿಹಾರವಾಗಿ ಪ್ರತಿ ಕರುವಿಗೆ-ರೂ.5,000/-, ಪ್ರತಿ ಹಸುವಿಗೆ-ರೂ.20,000/- ಹಾಗೂ ಪ್ರತಿ ಎತ್ತುವಿಗೆ- ರೂ.30,000/- ಗಳಂತೆ ನೀಡಲಾಗುತ್ತಿದೆ.<br>ಇದುವರೆವಿಗೆ ರೂ.37.00 ಕೋಟಿ ಪರಿಹಾರಧನ ಬಿಡುಗಡೆಯಾಗಿದ್ದು, ರೋಗದಿಂದ ಸಾವನ್ನಪ್ಪಿದ 17,564 ಜಾನುವಾರುಗಳ ಮಾಲೀಕರಿಗೆ ನೇರವಾಗಿ ವಿತರಿಸಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ ನೀಡಿದೆ.**<br>ರಾಜ್ಯದಲ್ಲಿ ದಿನಾಂಕ:08-02-2023 ರವರೆಗೆ 1,01,11,616 ಜಾನುವಾರುಗಳಿಗೆ ಲಸಿಕೆ ಹಾಕಲಾಗಿದ್ದು, ಚರ್ಮಗಂಟು ರೋಗವು ನಿಯಂತ್ರಣದಲ್ಲಿದೆ. |
| ಆ | ಹೈನುಗಾರಿಕೆಯನ್ನು ನಂಬಿರುವ ಹಾಲು ಉತ್ಪಾದಕ ಸಂಘಗಳಲ್ಲಿ ದುಡಿಯುತ್ತಿರುವ ಸಾವಿರಾರು ಸಿಬ್ಬಂದಿಗಳ ಜೀವನ ಶೋಚನೀಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ಅಥವಾ ಯೋಜನೆಗಳೇನು; | ಕರ್ನಾಟಕ ಹಾಲು ಮಹಾಮಂಡಳದ ಕಾರ್ಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಹಾಲು ಒಕ್ಕೂಟಗಳು ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು ಶೇಖರಿಸುವ ಪ್ರತಿ ಲೀಟರ್ ಹಾಲಿಗೆ ನಿರ್ವಹಣಾ ವೆಚ್ಚ ನೀಡುತ್ತಿದ್ದು, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಶೇಖರಿಸುವ ಹಾಲಿನ ಪ್ರಮಾಣವನ್ನಾಧರಿಸಿ ಸಂಘದ ಸಿಬ್ಬಂದಿಗಳಿಗೆ ಮಾಸಿಕ ವೇತನವನ್ನು ನಿಗದಿಪಡಿಸಿ ಪಾವತಿಸಲಾಗುತ್ತಿರುವ ಪದ್ಧತಿ ಜಾರಿಯಲ್ಲಿರುತ್ತದೆ. |

| | | |
|---|---|---|
| ಇ | ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಸರ್ಕಾರ ಯೋಜನೆಗಳನ್ನು ಕೈಗೊಂಡಿದೆಯೇ; ಯೋಜನೆಗಳು ಇದ್ದಲ್ಲಿ ಅವು ಯಾವುವು ಹಾಗೂ ಆ ಯೋಜನೆಗಳು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಜಾರಿಯಲ್ಲಿದೆ; | ರಾಜ್ಯ ಸರ್ಕಾರವು ಹೈನುಗಾರರನ್ನು ಪ್ರೋತ್ಸಾಹಿಸಲು ಹಾಲು ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ ರೈತರಿಗೆ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/- ರಂತೆ ಪ್ರೋತ್ಸಾಹಧನ ನೀಡುವ "ಕ್ಷೀರಧಾರೆ" ಯೋಜನೆಯನ್ನು ಜಾರಿಗೆ ತಂದಿರುತ್ತದೆ.<br><br>ಈ ಯೋಜನೆಯಡಿ ರಾಜ್ಯದ ಸುಮಾರು 8,60,000 ಸದಸ್ಯರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನವನ್ನು ನೇರವಾಗಿ ಡಿ.ಬಿ.ಟಿ. ಮುಖೇನ ಪಾವತಿ ಮಾಡಲಾಗುತ್ತಿದೆ. |
| ಈ | ಹೈನುಗಾರರ ಸಂಕಷ್ಟಕ್ಕೆ ಪ್ರೋತ್ಸಾಹ ಧನ ಹಾಗೂ ಪಶು ಆಹಾರಕ್ಕೆ ಸಬ್ಸಿಡಿ ನೀಡಲು ಸರ್ಕಾರ ವಿಶೇಷ ಅನುದಾನ ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ? | ರಾಜ್ಯ ಸರ್ಕಾರ 2022-23ನೇ ಆಯವ್ಯಯದಲ್ಲಿ "ಕ್ಷೀರಧಾರೆ" ಯೋಜನೆಗಾಗಿ ರೂ.1200.00 ಕೋಟಿ ಮೊತ್ತವನ್ನು ನಿಗದಿಪಡಿಸಿರುತ್ತದೆ.<br><br>ಪಶು ಆಹಾರಕ್ಕೆ ಸಬ್ಸಿಡಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

**ಇ-ಪಸಂಮೀ 31 ಸಲೆವಿ 2023**

**(ಪ್ರಭು ಬಿ. ಚವ್ಹಾಣ್)**
**ಪಶುಸಂಗೋಪನೆ ಸಚಿವರು**

## ಪ್ರಶ್ನೆ ಸಂಖ್ಯೆ:325 ಕ್ಕೆ ಅನುಬಂಧ

ಚರ್ಮಗಂಟು ರೋಗದಿಂದ ಮರಣಸಿದ ಜಾನುವಾರುಗಳ ಮಾಲಿಕರಿಗೆ ಇದುವರೆಗೆ ಬಿಡುಗಡೆಯಾದ ರೂ.37.00 ಕೋಟಿಯಲ್ಲಿ ವಿತರಿಸಲಾದ ಪರಿಹಾರ ಧನದ ವಿವರಗಳು (ಜಾನುವಾರುಗಳ ವಿವರ)

| ಕ್ರ ಸಂ | ವಿಭಾಗ | ಜಿಲ್ಲೆ | ಪರಿಹಾರ ವಿತರಿಸಲಾದ ಜಾನುವಾರುಗಳ ಸಂಖ್ಯೆ | | | | ಒಟ್ಟು ಮೊತ್ತ |
|---|---|---|---|---|---|---|---|
| | | | ಕರು | ಹಸು | ಎತ್ತು | ಒಟ್ಟು | |
| 1 | ಬೆಂಗಳೂರು | ಬೆಂಗಳೂರು ನಗರ | 14 | 60 | 13 | 87 | 16.60 |
| 2 | | ಬೆಂಗಳೂರು ಗ್ರಾಮಾಂತರ | 22 | 119 | 14 | 155 | 29.10 |
| 3 | | ಚಿತ್ರದುರ್ಗ | 259 | 541 | 327 | 1127 | 216.75 |
| 4 | | ಚಿಕ್ಕಬಳ್ಳಾಪುರ | 53 | 138 | 58 | 249 | 47.65 |
| 5 | | ದಾವಣಗೆರೆ | 154 | 521 | 185 | 860 | 167.20 |
| 6 | | ಕೋಲಾರ | 64 | 121 | 24 | 209 | 34.60 |
| 7 | | ರಾಮನಗರ | 55 | 120 | 10 | 185 | 29.00 |
| 8 | | ಶಿವಮೊಗ್ಗ | 75 | 169 | 91 | 335 | 63.95 |
| 9 | | ತುಮಕೂರು | 123 | 261 | 76 | 460 | 80.50 |
| 10 | ಮೈಸೂರು | ಚಾಮರಾಜನಗರ | 9 | 81 | 25 | 115 | 24.15 |
| 11 | | ಚಿಕ್ಕಮಗಳೂರು | 18 | 134 | 55 | 207 | 44.20 |
| 12 | | ದಕ್ಷಿಣ ಕನ್ನಡ | 1 | 21 | 0 | 22 | 4.25 |
| 13 | | ಹಾಸನ | 8 | 30 | 8 | 46 | 8.80 |
| 14 | | ಕೊಡಗು | 0 | 0 | 0 | 0 | 0.00 |
| 15 | | ಮೈಸೂರು | 5 | 31 | 11 | 47 | 9.75 |
| 16 | | ಮಂಡ್ಯ | 28 | 78 | 31 | 137 | 26.30 |
| 17 | | ಉಡುಪಿ | 0 | 0 | 0 | 0 | 0.00 |
| 18 | ಬೆಳಗಾವಿ | ಬೆಳಗಾವಿ | 538 | 2205 | 2141 | 4884 | 1111.93 |
| 19 | | ಬಾಗಲಕೋಟೆ | 88 | 310 | 323 | 721 | 163.30 |
| 20 | | ಧಾರವಾಡ | 49 | 209 | 191 | 449 | 101.55 |
| 21 | | ಗದಗ | 157 | 363 | 424 | 944 | 207.66 |
| 22 | | ಹಾವೇರಿ | 628 | 798 | 1107 | 2533 | 508.82 |
| 23 | | ಉತ್ತರ ಕನ್ನಡ | 5 | 25 | 52 | 82 | 18.32 |
| 24 | | ವಿಜಯಪುರ | 11 | 36 | 38 | 85 | 19.15 |
| 25 | ಕಲಬುರ್ಗಿ | ಬಳ್ಳಾರಿ | 580 | 861 | 1219 | 2660 | 561.51 |
| 26 | | ಬೀದರ | 28 | 23 | 18 | 69 | 11.40 |
| 27 | | ಕಲ್ಬುರ್ಗಿ | 8 | 12 | 14 | 34 | 7.00 |
| 28 | | ಕೊಪ್ಪಳ | 119 | 226 | 300 | 645 | 141.17 |
| 29 | | ರಾಯಚೂರು | 35 | 43 | 56 | 134 | 27.10 |
| 30 | | ಯಾದಗಿರಿ | 12 | 28 | 43 | 83 | 18.20 |
| | | ಒಟ್ಟು | 3146 | 7564 | 6854 | 17564 | 3699.91 |